## ಬೇಸಿಗೆಗೆ ಯಾವ ರೀತಿ ಬಟ್ಟೆ ಸೂಕ್ತ?

- ಬೇಸಿಗೆಗೆ ಹೇಳಿ ಮಾಡಿಸಿದ್ದಂದರೆ ಹತ್ತಿ ಬಟ್ಟೆಗಳು. ಶಾಖವನ್ನು ತಡೆದು, ದೇಹಕ್ಕೂ ಹಿತವೆನಿಸುವುದು ಈ ಕಾಟನ್ ಬಟ್ಟೆಗಳೇ. ಈ ಬಟ್ಟೆ ಬೆವರನ್ನು ಬೇಗನೆ ಹೀರಿಕೊಳ್ಳುತ್ತದೆ ಹಾಗೂ ಬೆವರು ವಾಸನೆ ಬರದಂತೆ ತಡೆಯುತ್ತದೆ. ಖಾದಿ ಬಟ್ಟೆ ಕೂಡ ಬೇಸಿಗೆಗೆ ಅತಿ ಸೂಕ್ತ ಎನಿಸಿವೆ.
- ಬೇಸಿಗೆಯಲ್ಲಿ ಮೈಗಂಟುವ ಬಟ್ಟೆಗಳಿಂದ ದೂರವುಳಿಯುವುದು ಸೂಕ್ತ. ಸೆಕೆಯ ಕಿರಿಕಿರಿಯಿಂದ ತಪ್ಪಿಸಿಕೊಳ್ಳಲು, ಬೇಸಿಗೆಯಲ್ಲಿ ಹೆಚ್ಚಾಗುವ ಬೆವರು ಗುಳ್ಳೆ, ಅಲರ್ಜಿ ಆಗುವುದನ್ನು ತಪ್ಪಿಸಲು ಬಿಗಿಯಾದ ಉಡುಪಿನ ಬದಲು ಸಡಿಲವಾದ ಉಡುಪನ್ನು ಆಯ್ಕೆ ಮಾಡಿಕೊಳ್ಳುವುದು ಒಳಿತು.
- ಬೇಸಿಗೆಯಲ್ಲಿ ಗಾಢ ಬಣ್ಣದ ಬಟ್ಟೆಗಳ ಬದಲು ತಿಳಿ ಬಣ್ಣದ ಉಡುಪುಗಳನ್ನು ಧರಿಸಿದರೆ ಶಾಖದಿಂದ ಕಿಂಚಿತ್ತಾದರೂ ತಪ್ಪಿಸಿಕೊಳ್ಳಬಹುದು. ಗಾಢ ಬಣ್ಣಗಳು ಹೆಚ್ಚು ಶಾಖ ನೀಡುತ್ತವೆ. ಹೀಗಾಗಿ ಈ ಕಾಲಕ್ಕೆ ತಿಳಿಬಣ್ಣದ ಬಟ್ಟೆಗಳ ಆಯ್ಕೆಯಿರಲಿ.
- ಗಾಢ ವಿನ್ಯಾಸ, ಮಣಿ, ಬೀಡಿಂಗ್ ಇತರೆ ಭಾರದ ಕಸೂತಿ ಹೊಂದಿರುವ ಉಡುಪುಗಳು ಬಿಸಿಲಿನಲ್ಲಿ ಕಿರಿಕಿರಿ ಎನಿಸಬಹುದು.
- ಬಿಸಿಲಿನಿಂದ ತಪ್ಪಿಸಿಕೊಳ್ಳಲು ಸ್ಕಾರ್ಫ್, ಟೋಪಿಯನ್ನು ಸದಾ ಜೊತೆಗಿಟ್ಟುಕೊಂಡರೆ ಒಳ್ಳೆಯದು.



### ಕಾಟನ್ ಟ್ರೌಸರ್‌ಗಳ ಕಾಲ

ಸೆಕೆ ಅಧಿಕವಾಗಿರುವುದರಿಂದ ಈ ಕಾಲದಲ್ಲಿ ಮೈಗಂಟುವಂಥ ಬಟ್ಟೆ ತೊಡುವ ಬದಲು ಸಡಿಲವಾದ, ಹಗುರವಾದ ಬಟ್ಟೆಗಳನ್ನು ಧರಿಸುವುದು ಉತ್ತಮ. ಸಡಿಲವಾದ ಉಡುಪುಗಳ ಸಾಲಿನಲ್ಲಿ ಟ್ರೌಸರ್‌ಗಳಿದ್ದು, ಕಾಟನ್ ಟ್ರೌಸರ್‌ಗಳು ಬಿಸಿಲ ಧಗೆಯನ್ನು ತಗ್ಗಿಸಬಲ್ಲ ಒಳ್ಳೆ ಆಯ್ಕೆ ಎನಿಸಿವೆ. ಟ್ರೌಸರ್‌ನಲ್ಲಿಯೂ ಕುರ್ತಾದಂಥ ಸಾಂಪ್ರದಾಯಿಕ ದಿರಿಸಿನೊಂದಿಗೆ ಧರಿಸಬಲ್ಲ, ಹಾಗೆಯೇ ಪಾಶ್ಚಾತ್ಯ ಶೈಲಿಯ ಮೇಲುಡುಗೆಗೂ ಸರಿಹೊಂದುವ ಸಾಕಷ್ಟು ವಿಧಗಳು ಈಗಿವೆ.

ಹಗುರವಾಗಿರುವ ಜೊತೆ ಸುಂದರವಾಗಿಯೂ ಕಾಣಿಸಿಕೊಳ್ಳಲು ಹರೇಮ್ ಪ್ಯಾಂಟ್ ತೊಡುವ ಯುವತಿಯರು ಹೆಚ್ಚಾಗಿದ್ದಾರೆ. ಈ ಹರೇಮ್ ಪ್ಯಾಂಟ್‌ಗಳು ದೊಗಳೆಯಾಗಿದ್ದು, ಕಾಟನ್ ಬಟ್ಟೆಯಲ್ಲಿಯೂ ದೊರೆಯುವುದರಿಂದ ಉತ್ತಮ ಆಯ್ಕೆ ಎನ್ನಬಹುದು. ಇದರ ಮೇಲೆ ಸಡಿಲ ಟೀ ಶರ್ಟ್ ಅಥವಾ ಟ್ಯೂನಿಕ್ ತೊಡುವ ರೂಢಿಯಿದೆ. ಹರೇಮ್ ಪ್ಯಾಂಟ್ ರೀತಿಯೇ ಇರುವ ಜೋಧ್‌ಪುರಿ ಶೈಲಿ ಅಥವಾ ಪಟಿಯಾಲ, ಧೋತಿ ಶೈಲಿಯ ಪ್ಯಾಂಟ್‌ಗಳು ಕೂಡ ಈ ಋತುವಿಗೆ ಅತ್ಯುತ್ತಮ.

ಬೇಸಿಗೆಯಲ್ಲಿ ಧರಿಸಬಹುದಾದ ಮೇಲುಡುಗೆಯಲ್ಲಿಯೂ ಹಲವು ತೆರವಿದೆ. ಸ್ಲೀವ್‌ಲೆಸ್ ತೊಡುವುದರಿಂದ ಚರ್ಮ ಟ್ಯಾನ್ ಆಗುತ್ತದೆ ಎನ್ನುವ ಯುವತಿಯರು ಈಗ ಬಲೂನ್ ಸ್ಲೀವ್ಸ್ ಇರುವ ಮೇಲುಡುಗೆಯತ್ತ ವಾಲಿದ್ದಾರೆ. ಗೌನ್ ಇಷ್ಟಪಡುವವರಿಗೆಂದೇ ಕಾಟನ್ ಗೌನ್‌ಗಳು ಲಗ್ಗೆ ಇಟ್ಟಿವೆ.

### ಫ್ರೀ ಫ್ಯಾಷನ್ ಪ್ರಯೋಗ

ಬೇಸಿಗೆಗೆ ತಕ್ಕಂತೆ ವಸ್ತ್ರವಿನ್ಯಾಸಗಳ ಪ್ರಯೋಗ ನಡೆಯುತ್ತಿದ್ದು, 'ಫ್ರೀ ಫ್ಯಾಷನ್' ಇದೀಗ ವಸ್ತ್ರವಿನ್ಯಾಸ ಕ್ಷೇತ್ರದ ಕೇಂದ್ರಬಿಂದುವಾಗಿದೆ. ಹಗುರವಾದ, ತೊಡಲು ಹಾಯೆನಿಸುವಂತೆ ವಸ್ತ್ರಗಳ ವಿನ್ಯಾಸವನ್ನು ಈ ಪರಿಕಲ್ಪನೆಯಲ್ಲಿ ರೂಪಿಸಲಾಗುತ್ತದೆ.

ಇದರಲ್ಲಿ ಮೈಗಂಟಿದಂತಿದ್ದರೂ ತೆಳು ಬಟ್ಟೆಯಿಂದ ಹಾಯೆನಿಸುವಂತೆ ವಿನ್ಯಾಸ ಮಾಡಲಾಗಿರುವ ಕಾರ್ಸೆಟ್ ಡ್ರೆಸ್‌ಗಳು, ಒಳ್ಳೆ ಲುಕ್ ಕೊಡುವ ಕೋಲ್ಡ್ ಶೋಲ್ಡರ್ ಮ್ಯಾಕ್ಸಿಗಳು, ದೊಗಳೆಯಾದ ಮ್ಯಾಕ್ಸಿ ಡ್ರೆಸ್‌ಗಳು, ಡಾಟೆಡ್ ಡ್ರೆಸ್‌ಗಳು ಸದ್ಯ ಟ್ರೆಂಡ್‌ನಲ್ಲಿವೆ.

ಶಾರ್ಟ್ ಟೆಂಟ್ ಕ್ಯಾರಾಮೆಲ್ ಡ್ರೆಸ್ ಕೂಡ ಚಾಲ್ತಿಯಲ್ಲಿದ್ದು, ಇದನ್ನು ಶಾರ್ಟ್ ಅಥವಾ ಸ್ನೀಕರ್ಸ್ ಜೊತೆ ಧರಿಸಬಹುದಾಗಿದೆ. ಕುರ್ತಾದಂತೆ ಕಾಣುವ ಯೋಕ್



ಡ್ರೆಸ್, ರ‍್ಯಾಪ್ ಡ್ರೆಸ್ (wrap dress) ಬಿಸಿಲಿಗೆ ತಕ್ಕ ಆಯ್ಕೆ ಎನಿಸುವುದರ ಜೊತೆಗೆ ಫ್ಯಾಷನಬಲ್ ಆಗಿವೆ.

### ಕಾಟನ್ ಬಟ್ಟೆಯಲ್ಲಿ ಹೊಸ ಟ್ರೆಂಡ್

ಈಗ ಎಲ್ಲಾ ರೀತಿಯ ಫ್ಯಾಷನಬಲ್ ಉಡುಪುಗಳೂ ಕಾಟನ್ ಬಟ್ಟೆಗಳಲ್ಲಿ ಲಭ್ಯವಿವೆ. ಬೇಸಿಗೆ ಹೆಚ್ಚಿರುವ ಈ ಎರಡು ತಿಂಗಳುಗಳಲ್ಲಿ ಆದಷ್ಟೂ ಹತ್ತಿ ಬಟ್ಟೆಗಳನ್ನೇ ಆಯ್ಕೆ ಮಾಡಿಕೊಳ್ಳುವುದು ಒಳಿತು ಎನ್ನುತ್ತಾರೆ ಬೆಂಗಳೂರಿನ ವಸ್ತ್ರವಿನ್ಯಾಸಕಿ ಸರೋಜಿನಿ ಹೊಂಬಾಳಿ.

'ಹತ್ತಿ ಬಟ್ಟೆ ಶಾಖವನ್ನು ಹೀರಿಕೊಳ್ಳುವುದಿಲ್ಲ. ಬೆವರಿನ ವಾಸನೆಯೂ ಬರುವುದಿಲ್ಲ. ಶಾಖದ ನಡುವೆ ದೇಹಕ್ಕೆ ಹಿತವಾಗಿರುವ ಕಾಟನ್ ಬಟ್ಟೆಯೇ ಈ ಕಾಲಕ್ಕೆ ಉತ್ತಮ. ವಸ್ತ್ರವಿನ್ಯಾಸ ಕ್ಷೇತ್ರದಲ್ಲಿ ಆರ್ಗಾನಿಕ್ ಬಣ್ಣಗಳನ್ನು ಬಳಸುವ ರೂಢಿ ಹೆಚ್ಚಾಗಿದೆ. ಇಂಥ ಬಟ್ಟೆಗಳನ್ನು ಆಯ್ಕೆ ಮಾಡಿಕೊಳ್ಳುವುದು ಒಳ್ಳೆಯದು. ತರಕಾರಿ, ಹೂವುಗಳಿಂದ ತೆಗೆದ ನೈಸರ್ಗಿಕ ಬಣ್ಣಗಳನ್ನು ಬಟ್ಟೆಗೆ ಬಳಸುವುದರಿಂದ ಚರ್ಮಕ್ಕೆ ಕೂಡ ಆರೋಗ್ಯಕರ' ಎನ್ನುತ್ತಾರೆ ಅವರು.

'ಕಾಟನ್ ಬಟ್ಟೆಯಲ್ಲಿಯೇ ಈಗ ಹಲವು ನಮೂನೆಯ ಟ್ಯೂನಿಕ್, ಕ್ರಾಪ್ ಟಾಪ್‌ಗಳು, ಸ್ಕರ್ಟ್, ಟ್ರೌಸರ್‌ಗಳು ಟ್ರೆಂಡ್‌ನಲ್ಲಿವೆ. ಅಸ್ಸಾಂ ಮೂಲದ ಗಮ್ಛಾ ಬಟ್ಟೆಯಿಂದ ವಿನ್ಯಾಸಗೊಂಡ ಸ್ಕರ್ಟ್, ಟಾಪ್‌ಗಳು ಪ್ರಚಲಿತದಲ್ಲಿವೆ. ಸೀರೆ ಉಡಲು ಬಯಸುವವರಿಗೆ 'ಮೇಖಲಾ ಚಾದರ್' ಎಂಬ ಹೊಸ ವಿಧ ಇಷ್ಟವಾಗುತ್ತದೆ. ಅಸ್ಸಾಂ ಮೂಲದ ಈ ಉಡುಪು ಸ್ಕರ್ಟ್, ದುಪ್ಪಟಾ, ಬ್ಲೌಸ್ ಒಳಗೊಂಡಿದ್ದು, ಸೀರೆಯಂತೆ ಕಾಣುವ, ಜೊತೆಗೆ ಸೀರೆಗಿಂತ ಅತಿ ಹಗುರವಾಗಿರುವ ವಸ್ತ್ರ' ಎಂದು ಟ್ರೆಂಡ್ ಬಗ್ಗೆ ವಿವರಿಸುತ್ತಾರೆ ಸರೋಜಿನಿ.